## 2018 ಕ.ತೀ.ವ. 255

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ಮಹಾರಾಜ ಮತ್ತು ಇತರರು -ವಿರುದ್ಧ- ಕರ್ನಾಟಕ ಸರ್ಕಾರ (ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ)*

ದಂಡ ಪ್ರಕ್ರಿಯಾ ಸಂಹಿತೆಯ 374(2)ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣಗಳ ಮೇರೆಗೆ ಇಲ್ಲಿನ ಅಪೀಲುದಾರರನ್ನು ದಂಡನೆ ಮತ್ತು ಶಿಕ್ಷೆಗೆ ಗುರಿಪಡಿಸಿರುವುದನ್ನು ಅಪೀಲುದಾರರು ಪ್ರಶ್ನಿಸಿದ್ದಾರೆ.

ಅಪೀಲುದಾರರ ವಿರುದ್ಧ ಪ್ರಸ್ತುತ ಪ್ರಕರಣದಲ್ಲಿನ ಆರೋಪಗಳನ್ನು ಸದರಿ ಯುಕ್ತ ಸಂದೇಹ ಮೀರಿ ರುಜುವಾತು ಪಡಿಸಿರುವುದಿಲ್ಲ. ಆರೋಪಿಯಿಂದ ಮೆಣಸಿನ ಪುಡಿ ವಶಪಡಿಸಿಕೊಂಡು ಸ್ವಾಧೀನಪಡಿಸಿಕೊಂಡಿರುವುದಕ್ಕೆ ಸಂಬಂಧಪಟ್ಟಂತೆ 1 ರಿಂದ 3 ಪ್ರಾ.ಸಾಕ್ಷಿಗಳು ಹೇಳಿಕೆಗಳು ಪರಸ್ಪರ ವಿರುದ್ಧವಾಗಿವೆ. 1 ರಿಂದ 3ನೇ ವಾದಿ ಸಾಕ್ಷಿಗಳ ಸಾದಾ ಬಟ್ಟೆಗಳ ಉಡುಪಿಗೆ ಸಂಬಂಧಪಟ್ಟಂತೆ ಅದೇ ಸ್ಥಿತಿಯಲ್ಲಿದೆ. ಎಂ.ಓ.ಎಸ್. 1 ರಿಂದ 3ನ್ನು ವಶಪಡಿಸಿಕೊಂಡಿರುವುದನ್ನು, ನಿಶಾನೆ ಪಿ.1ರ ಸಾಕ್ಷಿದಾರರನ್ನು ಪ್ರತ್ಯೇಕವಾಗಿ ಪರೀಕ್ಷಿಸುವುದರ ಮೂಲಕ ರುಜುವಾತು ಪಡಿಸಿರುವುದಿಲ್ಲ. 1 ರಿಂದ 3ನೇ ಪ್ರಾಥಮಿಕ ಸಾಕ್ಷಿಗಳ ಸಾಕ್ಷ್ಯದಲ್ಲಿ ವಿರುದ್ಧೋಕ್ತಿಗಳ ಸಾಮಗ್ರಿಯ ದೃಷ್ಠಿಯಿಂದ ಮತ್ತು ವಶಪಡಿಸಿಕೊಂಡಿರುವುದನ್ನು ಪ್ರತ್ಯೇಕ ಮಹಜರ್ ಸಾಕ್ಷಿದಾರರನ್ನು ಪರೀಕ್ಷಿಸುವುದರ ಮೂಲಕ ರುಜುವಾತುಪಡಿಸದೇ, ಮೆಣಸಿನ ಪುಡಿ ಮತ್ತು ಚಾಕುಗಳನ್ನು ವಶಪಡಿಸಿಕೊಂಡು ಅಂದರೆ, ಎಂ.ಒ.ಎಸ್.ಗಳನ್ನು ರುಜುವಾತು ಪಡಿಸಿರುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.

* ಕ್ರಿಮಿನಲ್ ಅಪೀಲು ಸಂಖ್ಯೆ: 289/2010, ದಿನಾಂಕ: 29ನೇ ಜನವರಿ, 2016.

**ಪ್ರಸ್ತುತ ಪ್ರಕರಣದ ದಾಖಲೆಯಿಂದ ಕಂಡು ಬರುವ ಸಂಗತಿಗಳು ಮತ್ತು ಸಂದರ್ಭಗಳ ದೃಷ್ಟಿಯಿಂದ, ಪ್ರಾಸಿಕ್ಯೂಷನ್ ಯುಕ್ತ ಸಂದೇಹವನ್ನು ಮೀರಿ ಅದರ ಪ್ರಕರಣವನ್ನು ಸಾಬೀತುಗೊಳಿಸುವುದಕ್ಕೆ ವಿಫಲವಾಗಿದೆ. ಅಪೀಲುದಾರರ ವಿರುದ್ಧ ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣದ ಅಡಿಯಲ್ಲಿ ಆರೋಪಗಳಿಗೆ ಪೂರಕವಾಗಿ ಕಾನೂನುಬದ್ಧ ಸಾಕ್ಷ್ಯವನ್ನು ಹೊಂದಿಲ್ಲದೇ ಇದ್ದರೂ ಅವರು, ತಪ್ಪಾಗಿ ತಪ್ಪಿತಸ್ಥರಾಗಿ ಕಂಡು ಬಂದಿದ್ದಾರೆ ಮತ್ತು ಕಾರಾವಾಸದ ಶಿಕ್ಷೆಗೆ ಒಳಪಡಿಸಲಾಗಿದೆ. ಎಲ್ಲಾ ಯುಕ್ತ ಸಂದೇಹಗಳನ್ನು ಪ್ರಾಸಿಕ್ಯೂಷನ್ ಅದರ ಪ್ರಕರಣವನ್ನು ಸಾಬೀತುಗೊಳಿಸುವುದಕ್ಕೆ ವಿಫಲವಾದ ದೃಷ್ಟಿಯಿಂದ, ಅಪೀಲುದಾರರು, ಯುಕ್ತ ಸಂದೇಹದ ಪ್ರಯೋಜನಕ್ಕೆ ಹಕ್ಕುಳ್ಳವರಾಗಿದ್ದಾರೆ. ಈ ವಿಷಯದ ಸದರಿ ಅಭಿಪ್ರಾಯದಲ್ಲಿ, ಪ್ರಶ್ನಿತ ತೀರ್ಪನ್ನು ಸಮರ್ಥಿಸಿಕೊಳ್ಳಲಾಗದು.**

***ಉಲ್ಲೇಖಿಸಲಾದ ಮೊಕದ್ದಮೆ:*** ***ಪ್ಯಾರಾದಲ್ಲಿ***

*1. ಎಐಆರ್ 1979 ಎಸ್‌ಸಿ 1412*
*ಚಾಟೂರಿ ಯಾದವ್ ಮತ್ತು ಇತರರು*
*–ವಿರುದ್ಧ– ಬಿಹಾರ ಸರ್ಕಾರ* *(ಉಲ್ಲೇ) 4*

ಅಪೀಲುದಾರರ ಪರ : ಶ್ರೀ ಎ.ಎಸ್. ಕುಲಕರ್ಣಿ – ವಕೀಲರು.
ಪ್ರತ್ಯಪೀಲುದಾರರ ಪರ : ಶ್ರೀ ಬಿ. ವಿಶ್ವೇಶ್ವರಯ್ಯ – ಹೆಚ್‌ಸಿಜಿಪಿ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ:**

1 ರಿಂದ 3ನೇ ಆರೋಪಿಗಳಾದ, ಅಪೀಲುದಾರರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ, ಬೆಂಗಳೂರು ಗ್ರಾಮೀಣ ಜಿಲ್ಲೆ ಅಪರಾಧ ಸಂಖ್ಯೆ:86/2009ರಲ್ಲಿ ದಿನಾಂಕ 21.03.2009 ರಂದು ದಸ್ತಗಿರಿ ಮಾಡಲಾಗಿದೆ ಮತ್ತು ಮುಖ್ಯ ನ್ಯಾಯಿಕ

ಮ್ಯಾಜಿಸ್ಟ್ರೇಟ್, ಬೆಂಗಳೂರು ಇವರ ಮುಂದೆ ಹಾಜರುಪಡಿಸಲಾಗಿದೆ ಹಾಗೂ ನ್ಯಾಯಿಕ ಅಭಿರಕ್ಷೆಗೆ ಒಪ್ಪಿಸಲಾಗಿದೆ ಮತ್ತು ತರುವಾಯ ಜಾಮೀನು ಮೇಲೆ ಬಿಡುಗಡೆಗೊಳಿಸಲಾಗಿದೆ. ಎಫ್‌ಐಆರ್/ನಿಶಾನೆ ಪಿ.3ನ್ನು ಪ್ರಾಸಾ.3ರ ಮೂಲಕ ದಾಖಲು ಮಾಡಲಾಗಿದೆ. ತನಿಖೆಯ ತರುವಾಯ ಆರೋಪ ಪಟ್ಟಿಯನ್ನು ದಾಖಲು ಮಾಡಲಾಗಿದೆ ಮತ್ತು ಸಿಸಿ ಸಂ.2827/2009 ರಂತೆ ದಾಖಲು ಮಾಡಲಾಗಿದೆ. ಪ್ರಕರಣವನ್ನು, ಸೆಷನ್ಸ್ ನ್ಯಾಯಾಲಯ, ಬೆಂಗಳೂರು ಗ್ರಾಮೀಣ ಜಿಲ್ಲೆ ಇವರಿಗೆ ಒಪ್ಪಿಸಲಾಗಿದ್ದು, ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಎಸ್‌ಸಿ ಸಂ.303/2009 ರಂತೆ ದಾಖಲು ಮಾಡಲಾಗಿದೆ. ಆರೋಪಿಯು, ದೋಷಾರೋಪವನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ಅಧ್ಯಕ್ಷಾಧಿಕಾರಿಗಳು, ತ್ವರಿತ ಗತಿ ನ್ಯಾಯಾಲಯ-I ಬೆಂಗಳೂರು ಗ್ರಾಮೀಣ ಜಿಲ್ಲೆ ಇವರ ಮುಂದೆ ವಿಚಾರಣೆ ಎದುರಿಸಲಾಗಿದೆಯೆಂದು ವಾದಿಸಿದ್ದಾರೆ.

2. ಆರೋಪಿಯ ವಿರುದ್ಧದ ಪ್ರಕರಣವನ್ನು ಸಾಬೀತುಪಡಿಸುವುದಕ್ಕೆ ಮೂವರು ಸಾಕ್ಷಿದಾರರನ್ನು ಪ್ರಾಸಿಕ್ಯೂಷನ್ ವಿಚಾರಣೆ ಮಾಡಿದೆ. ನ್ಯಾಯಾಲಯವು ಸೂಚಿಸಿದ ಪ್ರಶ್ನೆಗಳಿಗೆ ಉತ್ತರಿಸಿದ್ದು, ಆರೋಪಿಯ ವಿರುದ್ಧ ಅಪರಾಧದಲ್ಲಿ ಸಿಕ್ಕಿದ ಸಾಕ್ಷ್ಯವನ್ನು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ 1973ರ 313ನೇ ಪ್ರಕರಣದ ಅಡಿಯಲ್ಲಿ ಬಹಿರಂಗಪಡಿಸಲಾಗಿದೆ. ಆರೋಪಿಯು, ಆರೋಪವನ್ನು ಅಲ್ಲಗಳೆದಿದ್ದಾನೆ ಮತ್ತು ಅವರನ್ನು ತಪ್ಪಾಗಿ ಸಿಕ್ಕಿಸಲಾಗಿದೆಯೆಂದು ಹೇಳಲಾಗಿದೆ.

3. ಆರೋಪಿಗಳ ವಿರುದ್ಧದ ಅಪರಾಧಗಳ ಆರೋಪವನ್ನು ರುಜುವಾತುಪಡಿಸಲಾಗಿದೆ ಮತ್ತು ತತ್ಪರಿಣಾಮವಾಗಿ ಶಿಕ್ಷೆಯ ಆದೇಶವನ್ನು ಮಾಡಲಾಗಿದೆಯೆಂದು ಅಧಿವಿಚಾರಣಾ ನ್ಯಾಯಾಧೀಶರು ದಿನಾಂಕ 25.02.2010ರ ತೀರ್ಪಿನ ಮೂಲಕ ನಿರ್ಣಯವನ್ನು ದಾಖಲಿಸಿದ್ದಾರೆ. ಭಾರತೀಯ ದಂಡ ಸಂಹಿತೆ 399ನೇ ಪ್ರಕರಣದ ಅಡಿಯಲ್ಲಿ ಅಪರಾಧಕ್ಕಾಗಿ ಆರೋಪಿಗಳನ್ನು 3 ವರ್ಷಗಳ ಕಠಿಣ ಶಿಕ್ಷೆಗೆ ಒಳಪಡಿಸಲಾಗಿದೆ ಮತ್ತು ತಲಾ 5,000/- ರೂಪಾಯಿಗಳ ದಂಡವನ್ನು ವಿಧಿಸಿದೆ ಹಾಗೂ ಜುಲ್ಮಾನೆ ಸಂದಾಯ ತಪ್ಪಿದ್ದಲ್ಲಿ, ತದನಂತರ ಆರು ತಿಂಗಳ ಅವಧಿಯ ಕಠಿಣ ಶಿಕ್ಷೆಗೆ ಒಳಪಡಿಸುವುದೆಂದು ತಿಳಿಸಿದೆ. ಭಾರತೀಯ

ದಂಡ ಸಂಹಿತೆ, 402ನೇ ಪ್ರಕರಣದ ಅಡಿಯಲ್ಲಿ ಅಪರಾಧಕ್ಕಾಗಿ, ಆರೋಪಿಗಳನ್ನು 2 ವರ್ಷಗಳ ಕಠಿಣ ಶಿಕ್ಷೆಗೆ ಒಳಪಡಿಸುವುದು ಹಾಗೂ ತಲಾ 5,000/– ರೂಪಾಯಿಗಳ ಜುಲ್ಮಾನೆಯನ್ನು ಪಾವತಿಸುವುದು, ಜುಲ್ಮಾನೆ ಸಂದಾಯ ತಪ್ಪಿದ್ದಲ್ಲಿ, ತದನಂತರ ಆರು ತಿಂಗಳ ಅವಧಿಗಾಗಿ ಕಠಿಣ ಶಿಕ್ಷೆಗೆ ಒಳಪಡಿಸುವುದು. ಆದಾಗ್ಯೂ, ಈ ಎರಡು ಶಿಕ್ಷೆಗಳು ಏಕ ಕಾಲದಲ್ಲಿ ಇರುವಂತೆ ಆದೇಶಿಸಲಾಗಿದೆ. ಅಧಿವಿಚಾರಣಾ ನ್ಯಾಯಾಧೀಶರ ತೀರ್ಪು ಮತ್ತು ಆದೇಶದೊಂದಿಗೆ ಬಾಧಿತನಾಗಿದ್ದು, ಆರೋಪಿಗಳು ಈ ಅಪೀಲನ್ನು ದಾಖಲು ಮಾಡಿದ್ದಾರೆ.

4. ಶ್ರೀ ಎ.ಎಸ್. ಕುಲಕರ್ಣಿ, ಮಾನ್ಯ ವಕೀಲರು, ಮೊದಲನೇಯದಾಗಿ, ಪ್ರಾಸಿಕ್ಯೂಷನ್, ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಗಳು ಅನ್ವಯವಾಗುವ ಅಂಶಗಳು ಅದರ ಯಾವುದೇ ಸಾಮಗ್ರಿಯನ್ನು ದಾಖಲೆ ಮೇಲೆ ಮಂಡಿಸಿರುವುದಿಲ್ಲವೆಂದು ವಾದಿಸಿದ್ದಾರೆ. ಎರಡನೇಯದಾಗಿ, ದರೋಡೆ ಮಾಡಲು ಸಿದ್ಧತೆಗಳನ್ನು ಮಾಡಿದ ಅಪೀಲುದಾರರ ರುಜುವಾತನ್ನು ಪ್ರಾಸಿಕ್ಯೂಷನ್ ದಾಖಲೆ ಮೇಲೆ ಸಾಮಗ್ರಿಯನ್ನು ತಂದಿರುವುದಿಲ್ಲ. ಪ್ರಾಸಾಗಳು 1 ರಿಂದ 3ರ ಸಾಕ್ಷ್ಯವು ಪರಸ್ಪರ ವಿರುದ್ಧವಾಗಿದೆ ಮತ್ತು ನಂಬಲರ್ಹವಲ್ಲದ್ದಾಗಿದೆಯೆಂದು ಅವರು ವಾದವನ್ನು ಮಂಡಿಸಿದ್ದಾರೆ. ಮೂರನೇಯದಾಗಿ, ಮೊಕದ್ದಮೆ ಸಾಕ್ಷಿ.1/ಪ್ರಾಸಾ.3, ಎಫ್‌ಐಆರ್/ನಿಶಾನೆ ಪಿ.3ನ್ನು ದಾಖಲು ಮಾಡಿದ ವ್ಯಕ್ತಿಯೇ ಸ್ವತಃ ಅಪರಾಧದ ತನಿಖೆ ಮಾಡಿದ್ದಾನೆ ಮತ್ತು ವಶಪಡಿಸಿಕೊಳ್ಳಲಾದ ಮಹಜರ್ / ಪ್ರಾ.ಸಾ.1 ರಲ್ಲಿ ಸಹಿ ಮಾಡಿರುವ ಯಾರನ್ನೂ ವಿಚಾರಣೆ ನಡೆಸದೆ ಪೊಲೀಸ್ ಪೇದೆಗಳಾದ ಪ್ರಾ.ಸಾ.1 ಮತ್ತು 2 ಇವರನ್ನು ಮಾತ್ರ ವಿಚಾರಣೆ ನಡೆಸಿರುವ ನಿರ್ದಿಷ್ಟ ಕಾರಣಕ್ಕಾಗಿ ಅಂಥ ತನಿಖೆಯ ವಿಶ್ವಾಸಾರ್ಹತೆಯು ಸಂದೇಹಾಸ್ಪದವಾಗಿದೆ. ನಾಲ್ಕನೇಯದಾಗಿ, ಇಬ್ಬರು ಪ್ರತ್ಯೇಕ ಪಂಚಸಾಕ್ಷಿದಾರರನ್ನು ಪರೀಕ್ಷಿಸಿರುವುದಿಲ್ಲ ಮತ್ತು ಅದು, ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ಪ್ರಕರಣವನ್ನು ಸಾಬೀತುಪಡಿಸುವುದಕ್ಕೆ ವಿಫಲವಾಗಿದೆಯೆಂದು ನಿವೇದಿಸಿದ್ದಾರೆ. ***ಚಾಟೂರಿ ಯಾದವ್ ಮತ್ತು ಇತರರು –ವಿರುದ್ಧ– ಬಿಹಾರ ಸರ್ಕಾರ***[1], ತೀರ್ಮಾನವನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

1. ಎಐಆರ್ 1979 ಎಸ್‌ಸಿ 1412

5. ಅಪೀಲುದಾರರು ಇತರೇ ಇಬ್ಬರೊಂದಿಗೆ, ನಿರ್ಜನ ಪ್ರದೇಶದಲ್ಲಿರುವುದು ಕಂಡು ಬಂದಿದೆ ಮತ್ತು ಅಪರಾತ್ರಿ ವೇಳೆಯಲ್ಲಿ ಸೇರಿದ್ದಾರೆ, ಡಕಾಯಿತಿ ಮಾಡಲು ಸಂಚು ರೂಪಿಸಿದ್ದಾರೆ ಮತ್ತು ಹಾಗಾಗಿ ಇಬ್ಬರೂ ಅಪೀಲುದಾರರನ್ನು, ದಸ್ತಗಿರಿ ಮಾಡಿದ್ದಾರೆ ಮತ್ತು ಮೆಣಸಿನಪುಡಿ ಮತ್ತು ಚಾಕುಗಳನ್ನು ಸ್ಥಳದಲ್ಲಿ ವಶಪಡಿಸಿಕೊಳ್ಳಲಾಗಿದೆಯೆಂದು ಶ್ರೀ ಬಿ. ವಿಶ್ವೇಶ್ವರಯ್ಯ, ಮಾನ್ಯ ಹೆಚ್‌ಸಿಜಿಪಿರವರು ತಮ್ಮ ವಾದವನ್ನು ಮಂಡಿಸಿದ್ದಾರೆ, ಹಾಗೆಯೇ ಅಧಿವಿಚಾರಣಾ ನ್ಯಾಯಾಧೀಶರು, ಅವರ ವಿರುದ್ಧ ರೂಪಿಸಲಾದ ಆರೋಪದ ತಪ್ಪು ಸರಿಯಾಗಿಯೇ ಕಂಡು ಬಂದಿದೆ. ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ತಪ್ಪಿತಸ್ಥರೆಂದು ದಾಖಲಿಸಿದ ನಿರ್ಣಯಕ್ಕೆ ಪೂರಕವಾಗಿ ಮಾನ್ಯ ನ್ಯಾಯವಾದಿಯು ತಮ್ಮ ವಾದಗಳನ್ನು ಮಾಡಿದ್ದಾರೆ.

6. ಮಾನ್ಯ ನ್ಯಾಯವಾದಿಗಳ ವಾದಗಳನ್ನು ಪರಿಗಣಿಸಲಾಗಿದೆ ಮತ್ತು ದಾಖಲೆಯನ್ನು ಪರಿಶೀಲಿಸಲಾಗಿದ್ದು, ನನ್ನ ದೃಷ್ಟಿಯಲ್ಲಿ, ಅಪೀಲುದಾರರ ವಿರುದ್ಧ ಪ್ರಸ್ತುತ ಪ್ರಕರಣದಲ್ಲಿನ ಆರೋಪಗಳನ್ನು ಸದರಿ ಯುಕ್ತ ಸಂದೇಹ ಮೀರಿ ರುಜುವಾತು ಪಡಿಸಿರುವುದಿಲ್ಲ. ಆರೋಪಿಯಿಂದ ಮೆಣಸಿನ ಪುಡಿ ವಶಪಡಿಸಿಕೊಂಡು ಸ್ವಾಧೀನಪಡಿಸಿಕೊಂಡಿರುವುದಕ್ಕೆ ಸಂಬಂಧಪಟ್ಟಂತೆ 1 ರಿಂದ 3 ಪ್ರಾ.ಸಾಕ್ಷಿಗಳ ಹೇಳಿಕೆಗಳು ಪರಸ್ಪರ ವಿರುದ್ಧವಾಗಿವೆ. 1 ರಿಂದ 3ನೇ ವಾದಿ ಸಾಕ್ಷಿಗಳ ಸಾದಾ ಬಟ್ಟೆಗಳ ಉಡುಪಿಗೆ ಸಂಬಂಧಪಟ್ಟಂತೆ ಅದೇ ಸ್ಥಿತಿಯಲ್ಲಿದೆ. ಎಂ.ಓ.ಎಸ್. 1 ರಿಂದ 3ನ್ನು ವಶಪಡಿಸಿಕೊಂಡಿರುವುದನ್ನು, ನಿಶಾನೆ ಪಿ.1ರ ಸಾಕ್ಷಿದಾರರನ್ನು ಪ್ರತ್ಯೇಕವಾಗಿ ಪರೀಕ್ಷಿಸುವುದರ ಮೂಲಕ ರುಜುವಾತು ಪಡಿಸಿರುವುದಿಲ್ಲ. 1 ರಿಂದ 3ನೇ ಪ್ರಾ. ಸಾಕ್ಷಿಗಳ ಸಾಕ್ಷ್ಯದಲ್ಲಿನ ವಿರುದ್ಧೋಕ್ತಿಗಳ ಸಾಮಗ್ರಿಯ ದೃಷ್ಟಿಯಿಂದ ಮತ್ತು ವಶಪಡಿಸಿಕೊಂಡಿರುವುದನ್ನು ಪ್ರತ್ಯೇಕ ಮಹಜರ್ ಸಾಕ್ಷಿದಾರರನ್ನು ಪರೀಕ್ಷಿಸುವುದರ ಮೂಲಕ ರುಜುವಾತುಪಡಿಸದೇ, ಮೆಣಸಿನ ಪುಡಿ ಮತ್ತು ಚಾಕುಗಳನ್ನು ವಶಪಡಿಸಿಕೊಂಡು ಅಂದರೆ, ಎಂ.ಒ.ಎಸ್.ಗಳನ್ನು ರುಜುವಾತು ಪಡಿಸಿರುವುದಿಲ್ಲವೆಂದು ಅಭಿಪ್ರಾಯ ಪಡಲಾಗಿದೆ.

7. 1 ರಿಂದ 3ನೇ ಪ್ರಾ. ಸಾಕ್ಷಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಸಾಕ್ಷಿಧಾರರಾಗಿದ್ದಾರೆ. ಅವರ ಸಾಕ್ಷ್ಯದಿಂದ, ಆರೋಪಿಗಳಿಂದ ಪ್ರತಿರೋಧ

ವ್ಯಕ್ತವಾಗುವುದಿಲ್ಲ ಮತ್ತು ಪೊಲೀಸ್ ಸಿಬ್ಬಂದಿ ಅಥವಾ ವಶಪಡಿಸಿಕೊಳ್ಳಲಾದುದರ ಬಗ್ಗೆ ಸಾಕ್ಷ್ಯ ನೀಡಲು ಪ್ರಾ.ಸಾ. 3 ಕರೆತಂದ ವ್ಯಕ್ತಿಗಳಿಗೆ ಯಾವುದೇ ಗಾಯವನ್ನು ಅವರು ಉಂಟು ಮಾಡಿಲ್ಲವೆಂಬುದು ಸ್ಪಷ್ಟವಾಗಿದೆ. ಅಪರಾಧವನ್ನು ದಾಖಲು ಮಾಡಿದ ಪ್ರಾ.ಸಾ.3 ಸ್ವತಃ ಪ್ರಕರಣವನ್ನು ತನಿಖೆ ಮಾಡಿದ್ದಾರೆ. ಹಾಗೆಯೇ, ಅವನಿಗೆ ಅಧೀನವಾಗಿರುವ ಇಬ್ಬರು ಪೊಲೀಸ್ ಪೇದೆಗಳು (ಪ್ರಾ.ಸಾ. 1 ಮತ್ತು 2)ನ್ನು ಹೊರತುಪಡಿಸಿ ಈ ಘಟನೆಗೆ ಯಾರೇ ಇತರ ಸಾಕ್ಷ್ಯ ಇಲ್ಲದೆ ಇರುವ ನಿರ್ದಿಷ್ಟ ಕಾರಣಕ್ಕಾಗಿ, ತನಿಖೆಯ ವಿಶ್ವಾಸಾರ್ಹತೆಯು ಸಂದೇಹಾಸ್ಪದವಾಗಿದೆ.

8. ***(ಮೇಲಿನ) ಚಾಟೂರಿ ಯಾದವ್*** ಪ್ರಕರಣದಲ್ಲಿ, ಘಟನೆಯ ದಿನಾಂಕದಂದು, ಇತರರೊಂದಿಗೆ ಅಪೀಲುದಾರರು, ನಿರ್ಜನ ಪ್ರದೇಶದಲ್ಲಿ ಸೇರಿದ್ದಾರೆ ಮತ್ತು ಪೊಲೀಸ್ ಗಸ್ತು ಪಹರೆಯಿಂದ ಪತ್ತೆ ಮಾಡಲಾಗಿದ್ದು, ಅವರನ್ನು ನೋಡಿದ ಕೂಡಲೇ ಆರೋಪಿಗಳಲ್ಲಿ ಕೆಲವರು ಓಡಿ ಹೋಗಲು ಪ್ರಯತ್ನಿಸಿದ್ದಾರೆ. ಆದರೆ ಇತರರನ್ನು ಹಿಡಿದುಕೊಳ್ಳಲಾಗಿದೆ ಮತ್ತು ಅವರ ಪೈಕಿ ಒಬ್ಬನು ಬಂದೂಕು ಮತ್ತು ಜೀವಂತ ಗುಂಡುಗಳನ್ನು ಹೊಂದಿರುವುದು ಕಂಡು ಬಂದಿದೆ. ತಮ್ಮ ಜೇಬುಗಳಲ್ಲಿ ಪ್ರತಿಯೊಬ್ಬರು ಕೇವಲ ಒಂದು ಸಜೀವ ಗುಂಡನ್ನು ಇಟ್ಟುಕೊಂಡಿದ್ದಾರೆ. ಅವರು, ನಸುಬೆಳಗ್ಗೆ 1.00ಗಂಟೆಯ ಹೊತ್ತಿನಲ್ಲಿ ನಿರ್ಜನ ಪ್ರದೇಶದಲ್ಲಿ ಸೇರಿದ್ದಾರೆ ಮತ್ತು ಅಪರಾತ್ರಿ ವೇಳೆಯಲ್ಲಿ ಸೇರಿರುವ ಅವರ ಉಪಸ್ಥಿತಿಯ ಬಗ್ಗೆ ವಿವರಣೆ ನೀಡಿರುವುದಿಲ್ಲವೆಂಬ ಕೇವಲ ಸಂಗತಿಗಳ ಮೇಲೆ ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣದ ಅಡಿಯಲ್ಲಿ ಆರೋಪಿಗಳು ಅಪರಾಧಗಳ ತಪ್ಪಿತಸ್ಥರಾಗಿರುವುದಾಗಿ ಅಧಿವಿಚಾರಣಾ ನ್ಯಾಯಾಧೀಶರಿಗೆ ಕಂಡು ಬಂದಿದೆ. ಆರೋಪಿತರು ದರೋಡೆ ಮಾಡುವ ಉದ್ದೇಶಕ್ಕಾಗಿ ಸೇರಿದ್ದಾರೆ ಅಥವಾ ಅವರು, ಅದನ್ನು ಮಾಡುವುದಕ್ಕಾಗಿ ಯಾವುದೇ ಸಿದ್ಧತೆ ಮಾಡಿಕೊಂಡಿದ್ದರು ಎಂಬುದನ್ನು ತೋರಿಸುವ ಸಾಕ್ಷ್ಯವಿರುವುದಿಲ್ಲವೆಂಬ ಕಾರಣದ ಮೇಲೆ ಶಿಕ್ಷೆಯ ಆದೇಶವನ್ನು ನಿರ್ಣಯದ ತೀರ್ಪನ್ನು ಟೀಕಿಸಿದ್ದಾರೆ ಮತ್ತು ಸರ್ವೋಚ್ಚ ನ್ಯಾಯಾಲಯ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

"4. .......... ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು ಎತ್ತಲಾದ ವಾದವು, ಆಧಾರಪೂರ್ವಕವಾಗಿದೆ ಮತ್ತು ಪ್ರಭಾವವುಳ್ಳದ್ದಾಗಿದೆಯೆಂದು ನಾವು ಅಭಿಪ್ರಾಯಪಟ್ಟಿದ್ದೇವೆ. **ಎಂಟು ಜನರು, ಶಾಲೆಯ ಸ್ಥಳದಲ್ಲಿ ಕಂಡು ಬಂದಿದ್ದರೆಂಬುದು ಪ್ರಾಸಿಕ್ಯೂಷನ್ ಪ್ರಮುಖ ಸಾಕ್ಷ್ಯವಾಗಿರುವುದು ಕಂಡು ಬರುತ್ತದೆ. ಅವರಲ್ಲಿ ಕೆಲವರು, ಶಸಸ್ತ್ರ ಬಂದೂಕುಗಳು ಕೆಲವರು ತೋಟಾಗಳನ್ನು ಹೊಂದಿದ್ದರು ಮತ್ತು ಇತರರು ಓಡಿ ಹೋಗಿದ್ದಾರೆ. ಈ ವ್ಯಕ್ತಿಗಳು ನಸುಬೆಳಗ್ಗೆ 1 ಗಂಟೆ ಸಮಯದಲ್ಲಿ ಕಂಡುಬಂದಿದ್ದಾರೆಂಬ ಕೇವಲ ಕಾರಣ ಮಾತ್ರದಿಂದಲೇ ಅಪೀಲುದಾರರು, ದರೋಡೆ ಮಾಡುವ ಉದ್ದೇಶಕ್ಕಾಗಿ ಸೇರಿದ್ದಾರೆ ಅಥವಾ ಉದ್ದೇಶವನ್ನು ಸಾಧಿಸುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆಯೆಂಬುದು ರುಜುವಾತಾಗದು**. ಸ್ವತಃ ಉಚ್ಚ ನ್ಯಾಯಾಲಯವು ಅದರ ತೀರ್ಪಿನಲ್ಲಿರುವಂತೆ, ಶಾಲೆಯು, ಮಾರುಕಟ್ಟೆಗೆ ಅತೀ ಸಮೀಪದಲ್ಲಿದೆ. ಹಾಗಾಗಿ, ಅಪೀಲುದಾರರು, ದರೋಡೆ ಮಾಡುವ ಉದ್ದೇಶದೊಂದಿಗೆ ಅಂಥ ಎದ್ದು ಕಾಣುವ ಸ್ಥಳದಲ್ಲಿ ಸೇರಿದ್ದಾರೆ ಮತ್ತು ಅಂಥ ಅಪಾಯವುಂಟು ಮಾಡುವ ಸಂದರ್ಭವನ್ನು ತೆಗೆದುಕೊಳ್ಳುತ್ತಾರೆಂಬುದನ್ನು ನಂಬುವುದು ಕಷ್ಟವಾಗಿದೆ. ಅಪೀಲುದಾರರಾದ ಕೆಲವರನ್ನು ಮುಖ್ಯಪೇದೆಯಿಂದ ಹಿಡಿದುಕೊಳ್ಳಲಾಗಿದ್ದು, ಅವರು, ಅವನ ಮುಂದೆ ತಾವು ದರೋಡೆ ಮಾಡುವುದಕ್ಕೆ ಹೋಗುತ್ತೇವೆಂದು ಅವರಿಂದ ಹೇಳಿಕೆ ಪಡೆದು ಆಪಾದಿಸಲಾಗಿರುವ ಹೇಳಿಕೆಯನ್ನು ಸ್ಪಷ್ಟವಾಗಿ ಒಪ್ಪಲು ಸಾಧ್ಯವಿಲ್ಲದಿರುವುದರಿಂದಾಗಿ ಅದನ್ನು ಅಂಗೀಕರಿಸುವುದರಿಂದ ಹೊರತು ಪಡಿಸಲಾಗಿದೆ"

ಈ ಪ್ರಕರಣವು, ಪ್ರಸ್ತುತ ಪ್ರಕರಣಕ್ಕೆ ಸ್ವಲ್ಪಮಟ್ಟಿಗೆ ಸಾದೃಶ್ಯವಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು, ಆರೋಪಿತರು

ನಿರ್ಜನ ಪ್ರದೇಶದಲ್ಲಿರುವುದು ಪೊಲೀಸರಿಗೆ ಕಂಡು ಬಂದಿದೆ ಮತ್ತು ಅಪರಾತ್ರಿ ವೇಳೆಯಲ್ಲಿ ಸೇರಿದ್ದಾರೆ ಹಾಗೂ ಎಂ.ಓ.ಎಸ್.ಗಳನ್ನು ವಶಪಡಿಸಿಕೊಂಡು ಸ್ವಾಧೀನದಲ್ಲಿವೆ. ಹೀಗಾಗಿ, ಅವರು, ಆರೋಪಿಸಲಾದ ಅಪರಾಧಗಳ ಶಿಕ್ಷೆಗೆ ಹೊಣೆಯಾಗುತ್ತಾರೆಂದು ಅಭಿಪ್ರಾಯಪಟ್ಟಿದ್ದಾರೆ. ವಶಪಡಿಸಿಕೊಂಡಿರುವುದು ಪ್ರತ್ಯೇಕ ಸಾಕ್ಷಿದಾರರ ಮೂಲಕ ರುಜುವಾತಾಗಿರುವುದಿಲ್ಲ ಮತ್ತು ಅವರನ್ನು ವಿಚಾರಿಸದೆ ಇರಲು ಯಾವುದೇ ವಿವರಣೆ ನೀಡಿರುವುದಿಲ್ಲ.

9. ಪ್ರಸ್ತುತ ಪ್ರಕರಣದ ದಾಖಲೆಯಿಂದ ಕಂಡು ಬರುವ ಸಂಗತಿಗಳು ಮತ್ತು ಸಂದರ್ಭಗಳ ದೃಷ್ಠಿಯಿಂದ, ಪ್ರಾಸಿಕ್ಯೂಷನ್ ಯುಕ್ತ ಸಂದೇಹವನ್ನು ಮೀರಿ ಅದರ ಪ್ರಕರಣವನ್ನು ಸಾಬೀತುಗೊಳಿಸುವುದಕ್ಕೆ ವಿಫಲವಾಗಿದೆ. ಅಪೀಲುದಾರರ ವಿರುದ್ಧ ಭಾರತೀಯ ದಂಡ ಸಂಹಿತೆ 399 ಮತ್ತು 402ನೇ ಪ್ರಕರಣದ ಅಡಿಯಲ್ಲಿ ಆರೋಪಗಳಿಗೆ ಪೂರಕವಾಗಿ ಕಾನೂನುಬದ್ಧ ಸಾಕ್ಷ್ಯವನ್ನು ಹೊಂದಿಲ್ಲದೇ ಇದ್ದರೂ ಅವರು, ತಪ್ಪಾಗಿ ತಪ್ಪಿಸ್ಥರಾಗಿ ಕಂಡು ಬಂದಿದ್ದಾರೆ ಮತ್ತು ಕಾರಾವಾಸದ ಶಿಕ್ಷೆಗೆ ಒಳಪಡಿಸಲಾಗಿದೆ. ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿ ಪ್ರಾಸಿಕ್ಯೂಷನ್ ಅದರ ಪ್ರಕರಣವನ್ನು ಸಾಬೀತುಗೊಳಿಸುವುದಕ್ಕೆ ವಿಫಲವಾದ ದೃಷ್ಟಿಯಿಂದ, ಅಪೀಲುದಾರರು, ಯುಕ್ತ ಸಂದೇಹದ ಪ್ರಯೋಜನಕ್ಕೆ ಹಕ್ಕುಳ್ಳವರಾಗಿದ್ದಾರೆ. ಈ ವಿಷಯದ ಸದರಿ ಅಭಿಪ್ರಾಯದಲ್ಲಿ, ಪ್ರಶ್ನಿತ ತೀರ್ಪನ್ನು ಸಮರ್ಥಿಸಿಕೊಳ್ಳಲಾಗದು.

ಈ ಮೇಲಿನ ಕಾರಣಗಳಿಗಾಗಿ, ಅಪೀಲನ್ನು ಅಂಗೀಕರಿಸಲಾಗಿದೆ ಮತ್ತು ಅಧಿವಿಚಾರಣಾ ನ್ಯಾಯಾಧೀಶರಿಂದ ಮಾಡಿದ ಪ್ರಶ್ನಿತ ತೀರ್ಪನ್ನು ರದ್ದುಗೊಳಿಸಲಾಗಿದೆ ಮತ್ತು ಭಾರತ ದಂಡ ಸಂಹಿತೆಯ 399 ಮತ್ತು 402ನೇ ಪ್ರಕರಣಗಳ ಅಡಿಯಲ್ಲಿ ಅವರ ವಿರುದ್ಧದ ಅಪರಾಧಗಳಿಗಾಗಿ ರೂಪಿಸಲಾದ ಅಪೀಲುದಾರರ ಮೇಲಿನ ಆರೋಪಗಳಿಂದ ಅವರು ಖುಲಾಸೆ ಮಾಡಲಾಗಿದೆ. ಅವರ ಜಾಮೀನು ಪತ್ರಗಳನ್ನು ರದ್ದುಪಡಿಸಲಾಗಿದೆ.

---